KAKB320006012020

Presented on : 17-11-2020
Registered on : 17-11-2020
Decided on : 07-03-2026
Duration : 05 years/ 03 months/ 18 days.

**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಅಫಜಲಪೂರ.**

**ಉಪಸ್ಥಿತರುಃ**

**ಶ್ರೀ ಅನಿಲ ಅಮಾತೆ**
ಬಿ.ಎ.ಎಲ್.ಎಲ್.ಬಿ. (Hon's).,
ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಅಫಜಲಪೂರ.

**ಸಿ.ಸಿ.ನಂ.389/20**20

ದಿನಾಂಕಃ 07 ನೇ ಮಾರ್ಚ-2026 ರಂದು

**ಫಿರ್ಯಾದಿದಾರರುಃ**

ಕರ್ನಾಟಕ ರಾಜ್ಯ ಅಫಜಲಪೂರ ಪೊಲೀಸರಿಂದ)
**(ಸಹಾಯಕ ಸರ್ಕಾರಿ ಅಭಿಯೋಜಕರು)**

**- ವಿರುದ್ದ -**

**ಆರೋಪಿ:**

ಗಣಪತಿ ತಂದೆ ಬಸಣ್ಣ ಕಂಠಗೋಳ,
62 ವರ್ಷ, ಉಃಕೂಲಿ ಕೆಲಸ,
ವಾಸಃ ಮಲ್ಲಬಾದ ಗ್ರಾಮ, ತಾಃ ಅಫಜಲಪೂರ,
ಜಿಃ ಕಲಬುರಗಿ.

(ಆರೋಪಿತನ ಪರ ಶ್ರೀ. ಎ.ಎಸ್.ಕೆ.ವಕೀಲರು)

| | | | |
|---|---|---|---|
| 1. | ಪ್ರಕರಣ ನಡೆದ ದಿನಾಂಕ | : | 03.11.2020 |
| 2. | ಪ್ರಕರಣ ದಾಖಲಾದ ದಿನಾಂಕ | : | 03.11.2020 |
| 3. | ಆರೋಪಿತನನ್ನು ಬಂಧಿಸಿದ ದಿನಾಂಕ | : | -- |

| | | | |
|---|---|---|---|
| 4. | ಫಿರ್ಯಾದಿದಾರರ ಹೆಸರು | : | ಶ್ರೀ ವಿಶ್ವನಾಥ ಮುದರೆಡ್ಡಿ<br>ಪಿ.ಎಸ್.ಐ ಅಫಜಲಪೂರ. |
| 5. | ಸಾಕ್ಷಿಗಳ ವಿಚಾರಣೆ ಪ್ರಾರಂಭದ ದಿನಾಂಕ | : | 08.12.2021 |
| 6. | ಸಾಕ್ಷಿಗಳ ವಿಚಾರಣೆ ಮುಕ್ತಾಯದ ದಿನಾಂಕ | : | 29.12.2025 |
| 7. | ಅಪಾದನೆಗಳು | : | ಕರ್ನಾಟಕ ಪೊಲೀಸ್<br>ಕಾಯ್ದೆ ಕಲಂ.78(3) ರಡಿಯಲ್ಲಿ. |
| 8. | ನ್ಯಾಯಾಧೀಶರ ತೀರ್ಮಾನ | : | ಅಂತಿಮ ಆದೇಶದಂತೆ |

ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು
ಅಫಜಲಪೂರ.

**ತೀರ್ಪು**

ಠಾಣಾಧಿಕಾರಿಗಳು ಅಫಜಲಪೂರ ಪೊಲೀಸ್ ಠಾಣೆ, ಇವರು ಆರೋಪಿತನ ವಿರುದ್ದ ಕರ್ನಾಟಕ ಪೊಲೀಸ ಕಾಯ್ದೆ ಕಲಂ.78(3) ರಡಿಯಲ್ಲಿ ಶಿಕ್ಷಾರ್ಹ ಅಪಾದನೆಗಳಿಗಾಗಿ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಮೊಕದ್ದಮ್ಮೆಯ ಸಂಕ್ಷಿಪ್ತ ವಿವರಣೆಃ-**

ದಿನಾಂಕ:03.11.2020 ರಂದು ಸಾಯಂಕಾಲ 05-15 ಗಂಟೆ ಸುಮಾರಿಗೆ ಅಫಜಲಪೂರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಮಲ್ಲಬಾದ ಗ್ರಾಮದ ಲಕ್ಷ್ಮೀ ದೇವ ಸ್ಥಾನದ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಆರೋಪಿತನು ಸಾರ್ವಜನಿಕರಿಗೆ ಕೂಗಿ

ಕರೆದು 01-00 ರೂಪಾಯಿಗೆ 08-00 ರೂಪಾಯಿ ಗೆಲ್ಲಿರಿ ಅಂತಾ ಅನ್ನುತ್ತಾ ಸಾರ್ವಜನಿಕರ ಮನವೊಲಿಸಿ ಅವರಿಂದ ಹಣ ಪಡೆದು, ಅವರಿಗೆ ಅಂಕಿ ಸಂಖ್ಯೆ ಬರೆದ ಮಟಕಾ ಚೀಟಿಗಳನ್ನು ಕೊಟ್ಟು ಮಟಕಾ ಬರೆದುಕೊಳ್ಳುತ್ತಿದ್ದಾಗ, ಚಾಸಾ-2 ಮತ್ತು 3 ರವರ ಸಮಕ್ಷಮ ಚಾಸಾ-1 ರವರು ಚಾಸಾ-4 ಮತ್ತು 5 ರವರ ಸಹಾಯದಿಂದ ದಾಳಿ ಮಾಡಿ ಸದರಿ ಆರೋಪಿತನಿಂದ ರೂ.1,250/- ರೂಪಾಯಿ ನಗದು ಹಣ, ಅಂಕಿ ಸಂಖ್ಯೆ ಬರೆದ ಮಟಕಾ ಚೀಟಿ ಹಾಗೂ ಒಂದು ಪೆನ್ನ ವಶಪಡಿಸಿಕೊಂಡು ಸದರಿ ಆರೋಪಿತನ ವಿರುದ್ದ ಫಿರ್ಯಾದಿಯನ್ನು ನೀಡಿರುತ್ತಾರೆ.

3. ಸದರಿ ಫಿರ್ಯಾದಿಯ ಆಧಾರದ ಮೇಲೆ ಅಫಜಲಪೂರ ಪೊಲೀಸರು ತಮ್ಮ ಠಾಣಾ ಗುನ್ಹಾ ನಂ.149/2020 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ತನಿಖೆ ಪೂರ್ಣಗೊಂಡ ನಂತರ ಆರೋಪಿತನ ವಿರುದ್ದ ಕರ್ನಾಟಕ ಪೊಲೀಸ ಕಾಯ್ದೆ ಕಲಂ.78(3) ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಗಾಗಿ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

4. ದೋಷಾರೋಪಣೆ ಸಲ್ಲಿಸಿದ ನಂತರ ಪ್ರಕರಣದ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿತನ ವಿರುದ್ದ ಸಮನ್ಸ ಜಾರಿ ಮಾಡಿ, ಆರೋಪಿತನ ಹಾಜರಾತಿಯನ್ನು ಪಡೆಯಲಾಯಿತು. ನಂತರ ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ 207 ರ ಪ್ರಕಾರ ಆಪಾದನೆಯ ಪತ್ರದ ನಕಲು ಪ್ರತಿಯನ್ನು ಆರೋಪಿತನಿಗೆ ನೀಡಿ, ಆಪಾದನೆಯನ್ನು ರಚಿಸುವ ಮುನ್ನ ವಾದ ವಿವಾದವನ್ನು ಆಲಿಸಲಾಯಿತು. ನಂತರ ಕರ್ನಾಟಕ ಪೊಲೀಸ ಕಾಯ್ದೆ ಕಲಂ.78(3) ರಡಿಯಲ್ಲಿ ಆಪಾದನೆಯನ್ನು ರಚಿಸಿ ಆರೋಪಿತನಿಗೆ ಓದಿ

ಹೇಳಲಾಗಿ, ಸದರಿ ಆಪಾದನೆಯ ಒಪ್ಪಿಕೊಂಡಿರುವುದಿಲ್ಲ ಮತ್ತು ವಿಚಾರಣೆ ನಡೆಯಬೇಕೆಂದು ಕೇಳಿಕೊಂಡಿರುತ್ತಾರೆ.

5. ಅಭಿಯೋಜನಾ ಪಕ್ಷದವರು ಆರೋಪಿತನ ವಿರುದ್ದ ಮಾಡಿರುವ ಆರೋಪಗಳನ್ನು ರುಜುವಾತುಪಡಿಸಲು ತಮ್ಮ ಪರವಾಗಿ ಒಟ್ಟು 05 ಜನ ಸಾಕ್ಷಿದಾರರನ್ನು ಪ್ರಾಸಾ-1 ರಿಂದ 05 ಎಂದು ವಿಚಾರಣೆಗೆ ಒಳಪಡಿಸಿ ನಿಶಾನೆ ಪಿ-1 ರಿಂದ 3 ದಾಖಲೆ ಮತ್ತು ಮುದ್ದೇಮಾಲು 1 ನ್ನು ಗುರುತಿಸಿರುತ್ತಾರೆ.

6. ಅಭಿಯೋಜನೆಯ ಪರವಾಗಿ ಸಾಕ್ಷಿ ವಿಚಾರಣೆ ಮುಗಿದ ನಂತರ ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ.313 ರ ಅಡಿಯಲ್ಲಿ ಆರೋಪಿತನ ಹೇಳಿಕೆಯನ್ನು ದಾಖಲು ಮಾಡಿದ್ದು ಅದರಲ್ಲಿ ಆರೋಪಿತನು ಅಭಿಯೋಜನೆಯ ಪರ ಸಾಕ್ಷಿದಾರರು ಆರೋಪಿತನ ವಿರುದ್ದ ನುಡಿದಿರುವ ಸಾಕ್ಷ್ಯವನ್ನು ಅಲ್ಲಗಳೆದಿದ್ದು ತಮ್ಮ ಪರ ಸಾಕ್ಷಿದಾರರು ಇಲ್ಲವೆಂದು ನುಡಿದಿದ್ದರಿಂದ ಈ ಪ್ರಕರಣವನ್ನು ವಾದಕ್ಕೆ ಮುಂದೂಡಲಾಯಿತು.

7. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು ಮತ್ತು ನ್ಯಾಯಾಲಯದ ಸಮ್ಮುಖದಲ್ಲಿರುವ ಈ ಮೊಕದ್ದಮೆಗೆ ಸಂಬಂಧಪಟ್ಟ ದಾಖಲೆಗಳನ್ನು ಕೂಲಂಕೂಷವಾಗಿ ಪರಿಶೀಲಿಸಲಾಯಿತು.

8. ಉಭಯ ಪಕ್ಷಗಾರರ ವಾದ ವಿವಾದವನ್ನು ಆಲಿಸಲಾಯಿತು.

9. ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಬಂದಿರುತ್ತವೆ.

## ಅಂಶಗಳು

1. ದಿನಾಂಕ:03.11.2020 ರಂದು ಸಾಯಂಕಾಲ 05-15 ಗಂಟೆ ಸುಮಾರಿಗೆ ಅಫಜಲಪೂರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಮಲ್ಲಬಾದ ಗ್ರಾಮದ ಲಕ್ಷ್ಮೀ ದೇವಸ್ಥಾನದ ಗುಡಿಯ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಆರೋಪಿತನು ಸಾರ್ವಜನಿಕರಿಗೆ ಮನವೊಲಿಸಿ, 01-00 ರೂಪಾಯಿಗೆ 80 ರೂಪಾಯಿ ಗೆಲ್ಲಿರಿ ಎಂದು ಹೇಳುತ್ತಾ ಸಾರ್ವಜನಿಕರಿಂದ ಹಣಪಡೆದು ಅವರಿಗೆ ಅಂಕಿ ಸಂಖ್ಯೆ ಬರೆದ ಮಟಕಾ ಚೀಟಿಗಳನ್ನು ಕೊಟ್ಟು ಮಟಕಾ ಜೂಜಾಟವಾಡಿ, ಆ ಮೂಲಕ ಕರ್ನಾಟಕ ಪೊಲೀಸ ಕಾಯ್ದೆ ಕಲಂ.78(3) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

2. ಯಾವ ಆದೇಶ ಅಥವಾ ಶಿಕ್ಷೆ?

10. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರಗಳು ಈ ಕೆಳಗಿನಂತಿವೆಃ

ಅಂಶ ನಂ.1 : ನಕರಾತ್ಮಕವಾಗಿ.

ಅಂಶ ನಂ.2 : ಅಂತಿಮ ಆದೇಶದಂತೆ
ಈ ಕೆಳಕಂಡ ಕಾರಣಗಳಿಗಾಗಿ

**ಕಾ ರ ಣ ಗ ಳು**

11. **ಅಂಶ ನಂ.1** ಈ ಪ್ರಕರಣದಲ್ಲಿ ಅಭಿಯೋಜನೆಯು ಆರೋಪಿತನ ಮೇಲೆ ಅಪಾದಿಸಿದ ಆರೋಪವನ್ನು ಸಾಬೀತು ಪಡಿಸಲು ಚಾ.ಸಾ.1– ವಿಶ್ವನಾಥ ತಂದೆ ಮಹಾದೇವಪ್ಪ ಮುದರೆಡ್ಡಿ ಪಿ.ಎಸ್.ಐ, ಇವರನ್ನು ಪಿ.ಡಬ್ಲ್ಯೂ -1 ಎಂದು ಸಾಕ್ಷ್ಯ ಮಾಡಿಸಿದ್ದು, ಪಿ.ಡಬ್ಲ್ಯೂ -1 ರವರು ಈ ಪ್ರಕರಣದ ಫಿರ್ಯಾದಿ ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 03.11.2020 ರಂದು ಸಾಯಂಕಾಲ 04-30 ಗಂಟೆಗೆ ತಾನು, ಠಾಣಾ ಕರ್ತವ್ಯದಲ್ಲಿದ್ದಾಗ ಮಲ್ಲಾಬಾದ ಗ್ರಾಮದ ಮಹಾಲಕ್ಷ್ಮೀ ಗುಡಿಯ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಸದರಿ ಆರೋಪಿತನು ಹೋಗಿ-ಬರುವ ಜನರಿಗೆ ಒಂದು ರೊಪಾಯಿಗೆ 80/-ರೂಪಾಯಿ ಎಂದು ಕೂಗುತ್ತಾ ಮಟಕಾ ಚೀಟಿ ಬರೆಯುವ ಬಗ್ಗೆ ಮಾಹಿತಿ ಬಂದಿತ್ತು, ಅದನ್ನು ಠಾಣಾ ಗುನ್ನೆಯಲ್ಲಿ ಬರೆಯಿಸಿ, ನಂತರ ಚಾಸಾ-2 ಮತ್ತು 3 ರವರನ್ನು ಕರೆಯಿಸಿ ಚಾಸಾ-5 ರವರಿಗೆ ಇಬ್ಬರೂ ಪಂಚರನ್ನು ಕರೆಯಿಸುವಂತೆ ಸೂಚಿಸಿರುವುದಾಗಿ ಮತ್ತು ಅವರು ಚಾಸಾ-2 ಮತ್ತು 3 ರವರಿಗೆ ವಿಷಯ ತಿಳಿಸಿ ಸುಮಾರು 04-45 ಕ್ಕೆ ಠಾಣೆಯಿಂದ ಹೊರಟು 05-00 ಪಿ.ಎಂ ಕ್ಕೆ ಮಲ್ಲಾಬಾದ ಗ್ರಾಮಕ್ಕೆ ಹೋಗಿ ಬಸ್ಸ ನಿಲ್ದಾಣದ ಹತ್ತಿರ ವಾಹನ ನಿಲ್ಲಿಸಿ, ಗುಡಿಯ ಹತ್ತಿರ ನಡೆದುಕೊಂಡು ಹೋಗಿ ನೋಡಿದಾಗ, ಸದರಿ ಆರೋಪಿತನು ಹೋಗಿ-ಬರುವ ಜನರಿಗೆ ಒಂದು ರೂಪಾಯಿಗೆ 80/- ರೂಪಾಯಿ ಎಂದು ಕೂಗುತ್ತಾ ಮಟಕಾ ಚೀಟಿ ಬರೆಯುವುದನ್ನು ಖಚಿತಪಡಿಸಿಕೊಂಡು ತಾವು ಅವನನ್ನು ದಾಳಿ ಮಾಡಿ ಹಿಡಿದು ಅವನ ಹೆಸರನ್ನು ಕೇಳಲಾಗಿ ಗಣಪತಿ ಎಂದು ತಿಳಿಸಿರುವುದಾಗಿ ಸದರಿ ಆರೋಪಿತನಿಂದ ಒಂದು ಮಟಕಾ ಚೀಟಿ, ಒಂದು ಪೆನ್ನು ಹಾಗೂ ರೂ.1,250/-ಗಳನ್ನು ಸಾಯಂಕಾಲ 05-15

ರಿಂದ 06-15 ರ ವರೆಗೆ ಪಂಚರ ಸಮಕ್ಷಮ ಜಪ್ತಿಪಡಿಸಿಕೊಂಡು, ಅವುಗಳಿಗೆ ಚೀಟಿ ಬರೆದು ಪಂಚರ ಸಹಿಯನ್ನು ಪಡೆದುಕೊಂಡು, ನಂತರ 06-30 ಕ್ಕೆ ಠಾಣೆಗೆ ಬಂದು ಸರಕಾರಿ ಪರ ಫಿರ್ಯಾದಿ ದಾಖಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

12. ಈ ಪ್ರಕರಣದಲ್ಲಿ ಅಭಿಯೋಜನೆಯು ಆರೋಪಿತನ ಮೇಲೆ ಅಪಾದಿಸಿದ ಆರೋಪವನ್ನು ಸಾಬೀತು ಪಡಿಸಲು ಚಾ.ಸಾ.3–ಶಿವಪ್ಪ ತಂದೆ ಗಿರಿಮಲ್ಲಪ್ಪ, ಇವರನ್ನು ಪಿ.ಡಬ್ಲ್ಯೂ -2 ಎಂದು ಸಾಕ್ಷ್ಯ ಮಾಡಿಸಿದ್ದು, ಪಿ.ಡಬ್ಲ್ಯೂ -2 ರವರು ಈ ಪ್ರಕರಣದ ಜಪ್ತಿ ಪಂಚನಾಮೆ ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯನ್ನು ನೋಡಿರುತ್ತೇನೆಂದು, ಈಗ್ಗೆ ಒಂದು ವರ್ಷದ ಹಿಂದೆ ಮಲ್ಲಾಬಾದ ಗ್ರಾಮದಲ್ಲಿ ಮಟಕಾ-ಜೂಜಾಟದ ಕುರಿತು ಪೋಲಿಸರು ಕರೆದುಕೊಂಡು ಹೋಗಿದ್ದರು. ಅಲ್ಲಿ ಸದರಿ ಆರೋಪಿತನಿಂದ ಒಂದು ಮಟಕಾ ಚೀಟಿ, ಒಂದು ಪೆನ್ನು ಹಾಗೂ ರೂ.1,250/-ಗಳನ್ನು ತನ್ನ ಹಾಗೂ ಚಾಸಾ-2 ರವರ ಸಮಕ್ಷಮ ಜಪ್ತಿಪಡಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

13. ಈ ಪ್ರಕರಣದಲ್ಲಿ ಅಭಿಯೋಜನೆಯು ಆರೋಪಿತನ ಮೇಲೆ ಅಪಾದಿಸಿದ ಆರೋಪವನ್ನು ಸಾಬೀತು ಪಡಿಸಲು ಚಾ.ಸಾ.6–ರುದ್ರಪ್ಪ ತಂದೆ ರಾಮಪ್ಪ ನಿವೃತ್ತ ನೌಕರ, ಇವರನ್ನು ಪಿ.ಡಬ್ಲ್ಯೂ -3 ಎಂದು ಸಾಕ್ಷ್ಯ ಮಾಡಿಸಿದ್ದು, ಪಿ.ಡಬ್ಲ್ಯೂ -3 ರವರು ಈ ಪ್ರಕರಣದ ತನಿಖಾಧಿಕಾರಿ ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 03.11.2020 ರಂದು ತಾನು ಕರ್ತವ್ಯದಲ್ಲಿದ್ದಾಗ, ಚಾಸಾ-1 ರವರು ಸಾಯಂಕಾಲ 06-30 ಕ್ಕೆ ಚಾಸಾ-4 ಮತ್ತು 5 ರವರು ಹೇಳಿಕೆ ನೀಡಿರುತ್ತಾರೆಂದು ಹಾಗೂ ಒಬ್ಬ ಆರೋಪಿ, ಮುದ್ದೇಮಾಲು ಮತ್ತು ಪಂಚನಾಮೆಯನ್ನು ಹಾಜರುಪಡಿಸಿರುತ್ತಾರೆಂದು

ಹಾಗೂ ಅವುಗಳ ಆಧಾರದ ಮೇಲೆ ತಾನು ಪ್ರಕರಣವನ್ನು ದಾಖಲಿಸಿಕೊಂಡು, ಮಾನ್ಯ ನ್ಯಾಯಾಲಯಕ್ಕೆ ಪ್ರ.ವ.ವರದಿಯನ್ನು ಸಲ್ಲಿಸಿರುತ್ತೇನೆಂದು ಹಾಗೂ ಆರೋಪಿತನ ವಿರುದ್ದ ದೋಷಾರೋಪಣೆ ಪಟ್ಟಿಯನ್ನು ಚಾಸಾ-1 ರವರು ಸಲ್ಲಿಸಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ.

14. ಈ ಪ್ರಕರಣದಲ್ಲಿ ಅಭಿಯೋಜನೆಯು ಆರೋಪಿತನ ಮೇಲೆ ಅಪಾದಿಸಿದ ಆರೋಪವನ್ನು ಸಾಬೀತು ಪಡಿಸಲು ಚಾ.ಸಾ.2–ಚಂದಪ್ಪ ತಂದೆ ರಮೇಶ, ಇವರನ್ನು ಪಿ.ಡಬ್ಲ್ಯೂ -4 ಎಂದು ಸಾಕ್ಷ್ಯ ಮಾಡಿಸಿದ್ದು, ಪಿ.ಡಬ್ಲ್ಯೂ -4 ರವರು ಈ ಪ್ರಕರಣದ ಜಪ್ತಿ ಪಂಚನಾಮೆ ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ-3 ರವರ ಪರಿಚಯ ಇಲ್ಲ. ತನಗೆ ನಿಶಾನೆ ಪಿ-2 ರ ಜಪ್ತಿ ಪಂಚನಾಮೆಯನ್ನು ತೋರಿಸಿದ್ದು, ತಾನು ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಪೋಲಿಸರು ಸಹಿ ಮಾಡು ಎಂದು ಹೇಳಿದ್ದಕ್ಕೆ ಸಹಿ ಮಾಡಿರುತ್ತೇನೆಂದು ಹಾಗೂ ಯಾವ ದಿನಾಂಕದಂದು ಸಹಿ ಮಾಡಿರುತ್ತೇನೆ ಎಂದು ತನಗೆ ನೆನಪಿಲ್ಲ. ತನಗೆ ಈ ಪ್ರಕರಣದ ಕುರಿತು ಯಾವುದೇ ಮಾಹಿತಿ ಇಲ್ಲ. ತನ್ನ ಸಮಕ್ಷಮ ಯಾವುದೇ ಜಪ್ತಿ ಪಂಚನಾಮೆ ಮಾಡಿರುವುದಿಲ್ಲವೆಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

15. ಈ ಪ್ರಕರಣದಲ್ಲಿ ಅಭಿಯೋಜನೆಯು ಆರೋಪಿತನ ಮೇಲೆ ಅಪಾದಿಸಿದ ಆರೋಪವನ್ನು ಸಾಬೀತು ಪಡಿಸಲು ಚಾ.ಸಾ.5–ರಾವುತಪ್ಪ ತಂದೆ ಬಸಪ್ಪ ಪಿ.ಸಿ.-571, ಇವರನ್ನು ಪಿ.ಡಬ್ಲ್ಯೂ -5 ಎಂದು ಸಾಕ್ಷ್ಯ ಮಾಡಿಸಿದ್ದು, ಪಿ.ಡಬ್ಲ್ಯೂ -5 ರವರು ಈ ಪ್ರಕರಣದ ಹೇಳಿಕೆ ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 03.11.2020 ರಂದು

ತಾನು ಮತ್ತು ಚಾಸಾ-4 ರವರು ಠಾಣಾ ಕರ್ತವ್ಯದಲ್ಲಿದ್ದಾಗ, ಚಾಸಾ-1 ರವರು ತಮಗೆ ತಿಳಿಸಿದ್ದೇನೆಂದರೆ ಮಲ್ಲಾಬಾದ ಗ್ರಾಮದ ಲಕ್ಷ್ಮೀ ದೇವಸ್ಥಾನದ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಹೋಗಿಬರುವ ಜನರಿಗೆ ಮಟಕಾ ನಂಬರ ಬರೆದುಕೊಡುತ್ತಿದ್ದಾನೆಂದು ಹಾಗೂ 1 ರೂ.ಗೆ 80 ರೂಪಾಯಿ ಎಂದು ಜನರನ್ನು ಮನವೂಲಿಸಿ ಅವರಿಂದ ಹಣ ಪಡೆದು, ಅವರಿಗೆ ಅಂಕಿ ಸಂಖ್ಯೆ ಚೀಟಿ ಬರೆದುಕೊಡುತ್ತಿದ್ದಾನೆ ಎಂದು ಮಾಹಿತಿ ಬಂದ ಮೇರೆಗೆ ದಾಳಿ ಮಾಡುವುದಿದ್ದು ಅದಕ್ಕಾಗಿ ಚಂದಪ್ಪ ಮತ್ತು ಶಿವಪ್ಪ ಎನ್ನುವವರನ್ನು ಠಾಣೆಗೆ ಕರೆದುಕೊಂಡು ಬಂದು ಅವರಿಗೆ ಭಾತ್ಮಿ ವಿಷಯ ತಿಳಿಸಿ ಪಂಚರಾಗಲು ಕೋರಿದ್ದು, ಸದರಿಯವರು ಒಪ್ಪಿಕೊಂಡ ಮೇರೆಗೆ ಸಾಯಂಕಾಲ 4-45ಕ್ಕೆ ತಾನು, ಚಾಸಾ-1, ಚಾಸಾ-4 ಮತ್ತು ಪಂಚರು ಸೇರಿ ಮಲ್ಲಾಬಾದ ಗ್ರಾಮಕ್ಕೆ ಸಾಯಂಕಾಲ 05-00 ಗಂಟೆಗೆ ಮಲ್ಲಾಬಾದ ಗ್ರಾಮ ತಲುಪಿ ಬಸ್ ನಿಲ್ದಾಣ ಹತ್ತಿರ ತಮ್ಮ ವಾಹನ ನಿಲ್ಲಿಸಿ ದೇವಸ್ಥಾನ ಹತ್ತಿರ ನಡೆದುಕೊಂಡು ಹೋಗಿ ದೇವಸ್ಥಾನದ ಹತ್ತಿರ ಮರೆಯಲ್ಲಿ ನಿಂತು ನೋಡಿ ಅಲ್ಲಿ ಸಾರ್ವಜನಿಕ ಸ್ಥಳದಲ್ಲಿ ಸದರಿ ಆರೋಪಿತನು ಸಾರ್ವಜನಿಕರಿಂದ ಹಣ ಪಡೆದು ನಂಬರ ಬರೆದುಕೊಡುತ್ತಿರುವುದು ಕಂಡುಬಂದಿರುತ್ತದೆ. ನಂತರ 5-15ಕ್ಕೆ ಆತನ ಮೇಲೆ ದಾಳಿ ಮಾಡಿ ವಿಚಾರಿಸಿದಾಗ ಆತನ ಹೆಸರು ಗಣಪತಿ ತಂದೆ ಬಸಣ್ಣ ಸಾಃ ಮಲ್ಲಾಬಾದ ಅಂತ ತಿಳಿಸಿರುತ್ತಾನೆಂದು ಹಾಗೂ ಸದರಿ ಆರೋಪಿತನ ಅಂಗ ಶೋದನೆ ಮಾಡಿ ನೋಡಿದಾಗ ಆತನ ಬಳಿ ರೂ.1250/- ನಗದು ಹಣ, ಒಂದು ಬಾಲ ಪೆನ್ನು ಮತ್ತು ಒಂದು ಚೀಟಿ ದೊರೆತ್ತಿದ್ದು, ಅವುಗಳನ್ನು ಪಂಚರ ಸಮಕ್ಷಮ 05-15 ರಿಂದ 6-15 ರವರೆಗೆ ಜಪ್ತಿ ಪಂಚನಾಮೆ ಮಾಡಿ ಜಪ್ತಿ ಪಡಿಸಿಕೊಂಡಿರುತ್ತಾರೆಂದು ಹಾಗೂ ತಾನು ಈ ಕುರಿತು ಚಾಸಾ-6 ರವರ ಮುಂದೆ ಹೇಳಿಕೆ ನೀಡಿರುತ್ತೇನೆಂದು ಹಾಗೂ ಜಪ್ತಿಪಡಿಸಿಕೊಂಡ

ಮುದ್ದೇಮಾಲು ನೋಡಿದರೆ ಗುರುತಿಸುತ್ತೇನೆಂದು ಹಾಗೂ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನನ್ನು ನೋಡಿ ಗುರುತಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

16. ಈ ಪ್ರಕರಣದಲ್ಲಿ ಪ್ರಾಸಾ-1, 3 ಮತ್ತು 5 ರವರು ಅಧಿಕಾರಿ ವರ್ಗದ ಸಾಕ್ಷಿದಾರರಾಗಿರುತ್ತಾರೆ. ಈ ಪ್ರಕರಣದ ಗುನ್ನೆ ಸ್ಥಳದ ಜಪ್ತಿ ಪಂಚನಾಮೆ ಸಾಕ್ಷಿದಾರರಾದ ಪ್ರಾಸಾ-4 ರವರು ಈ ಪ್ರಕರಣಕ್ಕೆ ಪ್ರತಿಕೂಲ ಹೇಳಿಕೆಯನ್ನು ನುಡಿದಿರುತ್ತಾರೆ. ಈ ಪ್ರಕರಣದ ತನಿಖಾಧಿಕಾರಿಯವರು ಗುನ್ನೆ ಸ್ಥಳದ ಸುತ್ತಮುತ್ತಲಿನ ಮತ್ತು ಪ್ರತ್ಯಕ್ಷ ಸಾಕ್ಷಿದಾರರ ಹೇಳಿಕೆಯನ್ನು ಪಡೆದು ಸಾಕ್ಷ್ಯ ನುಡಿಸಿರುವುದಿಲ್ಲ. ಜಪ್ತಿಪಡಿಸಿಕೊಂಡರು ಎಂದು ಹೇಳುವ ರೂ.1250/-ನಗದು ಹಣವನ್ನು ಯಾವ ಯಾವ ಮುಖ ಬೆಲೆ ನೋಟುಗಳು ಇರುತ್ತವೆ ಎಂದು ತೋರಿಸಲು ವಿಫಲರಾಗಿರುತ್ತಾರೆ. ಜಪ್ತಿಪಡಿಸಿಕೊಂಡ ಕಾಗದ ಚೀಟಿಯಲ್ಲಿ ಯಾವ ನಂಬರಗಳನ್ನು ಬರೆಯಲಾಗಿದೆ ಎಂದು ಹೇಳಿರುವುದಿಲ್ಲ. ಯಾವ ಕಂಪನಿಯ ಮಟಕಾ ಬರೆಯುತ್ತಿದ್ದೇನೆಂದು ತನಿಖೆಯಲ್ಲಿ ಪತ್ತೆ ಹಚ್ಚಿರುವುದಿಲ್ಲ. ಮತ್ತು ಆರೋಪಿತನು ಯಾವ ಯಾವ ವ್ಯಕ್ತಿಗಳಿಂದ ರೂ.1250/- ರೂಪಾಯಿಗಳನ್ನು ಪಡೆದು ಯಾವ ಯಾವ ಕಂಪನಿಯ ಮಟಕಾ ನಂಬರಗಳನ್ನು ಬರೆದುಕೊಟ್ಟಿರುತ್ತಾನೆ ಮತ್ತು ಈತನು ಯಾವ ಏಜೆಂಟಿನ ಅಡಿಯಲ್ಲಿ ಕೆಲಸ ಮಾಡುತ್ತಾನೋ ಅಥವಾ ನೇರವಾಗಿ ಮಟಕಾ ಕಂಪನಿಯ ಕಚೇರಿಯೊಂದಿಗೆ ಸಂಪರ್ಕ ಹೊಂದಿದ್ದಾನೆಂಬುದನ್ನು ತನಿಖೆಯಲ್ಲಿ ಪತ್ತೆ ಹಚ್ಚಿರುವುದಿಲ್ಲ. ಮತ್ತು ಆರೋಪಿತನಿಗೆ ಮಟಕಾ ಚೀಟಿ ಬರೆಯುವುದರಿಂದ ಎಷ್ಟು ಕಮೀಷನ್ ಹಣ ಬರುತ್ತಿತ್ತು ಎಬುದನ್ನು ತನಿಖೆಯಲ್ಲಿ ಪತ್ತೆ ಹಚ್ಚಿರುವುದಿಲ್ಲ ಆ ಕುರಿತು ಸಾಕ್ಷಿಯಲ್ಲಿ ನುಡಿದಿರುವುದಿಲ್ಲ. ಒಬ್ಬ ವ್ಯಕ್ತಿಯ ಅಂಗಶೋದನೆ ಅಥವಾ ಸ್ಥಳ ಶೋದನೆ ಮಾಡಬೇಕಾದರೆ ಅನುಸರಿಸತಕ್ಕ

ಕಾನೂನಿನ ನಿಯಮಗಳನ್ನು ದಾಳಿ ಅಧಿಕಾರಿ ಚಾಸಾ-1 ರವರು ಪಾಲಿಸಿರುತ್ತಾನೆಂದು ತೋರಿಸಲು ಯಾವುದೇ ದಾಖಲಾತಿಗಳನಾಗಲೀ ಅದರ ಕುರಿತು ಹೇಳಿಕೆಯನಾಗಲೀ ನೀಡಿರುವುದಿಲ್ಲ.

17. ಸದರಿ ಪ್ರಾಸಾ-1, 3 ಮತ್ತು 5 ಅಧಿಕಾರಿ ವರ್ಗದ ಸಾಕ್ಷಿದಾರರು ಮತ್ತು ಹಿತಾಸಕ್ತಿವುಳ್ಳ ಸಾಕ್ಷಿದಾರರಾಗಿರುತ್ತಾರೆ. ಆರೋಪಿತನ ವಿರುದ್ದ ಆಪಾದನೆಯನ್ನು ರುಜುವಾತುಪಡಿಸಲು ಯಾವುದೇ ಪ್ರತ್ಯಕ್ಷ ಸಾಕ್ಷಿಯನ್ನು ಸಾಕ್ಷ್ಯ ಮಾಡಿಸಿರುವುದಿಲ್ಲ. ಪ್ರಾಸಾ-1, 3 ಮತ್ತು 5 ರವರು ಅಭಿಯೋಜನೆಗೆ ಪೂರಕವಾಗಿ ಸಾಕ್ಷಿ ನುಡಿದಿದ್ದರೂ ಸಹ ಸದರಿಯವರ ಸಾಕ್ಷಿಯನ್ನು ಪುಷ್ಠಿಕರಿಸಲು, ನಂಬಲು ಸ್ವತಂತ್ರ ಮತ್ತು ಪ್ರತ್ಯಕ್ಷ ಸಾಕ್ಷಿಗಳ ಕೊರತೆ ಇರುತ್ತದೆ.

18. ಆದ್ದರಿಂದ ಸದರಿ ಪ್ರಾಸಾ-1, 3 ಮತ್ತು 5 ರವರು ಅಧಿಕಾರಿ ವರ್ಗದ ಹಿತಾಸಕ್ತಿವುಳ್ಳ ಸಾಕ್ಷಿದಾರರಾಗಿದ್ದರಿಂದ ಮತ್ತು ಸದರಿಯವರ ಹೇಳಿಕೆಗಳನ್ನು ಪುಷ್ಠಿಕರಿಸುವ ಸಾಕ್ಷ್ಯಗಳು ಅಲಭ್ಯ ಇರುವುದರಿಂದ ಸದರಿಯವರ ಸಾಕ್ಷಿ ಹೇಳಿಕೆಗಳನ್ನು ಸಂಶಯಾತೀತವಾಗಿ ನಂಬಲು ಅರ್ಹರಾಗಿರುವುದಿಲ್ಲ.

19. ಆದ್ದರಿಂದ ಅಭಿಯೋಜನೆಯು ಆರೋಪಿತನ ಪ್ರತಿರಕ್ಷೆಯನ್ನು ಪರಿಗಣಿಸಿ, ಪ್ರಸ್ತುತ ಪ್ರಕರಣವನ್ನು ನೋಡಲಾಗಿ, ಅಭಿಯೋಜನೆಯು ತನ್ನ ಪ್ರಕರಣವನ್ನು ಸಂಶಯಾತೀತವಾಗಿ ಸಾಬಿತು ಪಡಿಸಿರುತ್ತದೆ ಎಂದು ಹೇಳಲು ಬರುವುದಿಲ್ಲ. ಅಭಿಯೋಜನೆಯ ಪ್ರಕರಣದಲ್ಲಿ ಕಂಡು ಬಂದ ಯುಕ್ತ ಸಂಶಯದ ಲಾಭವನ್ನು

ಆರೋಪಿತನು ಪಡೆಯಲು ಹಕ್ಕುವುಳ್ಳವನು ಎಂದು ನಿರ್ಣಯಿಸಿ ಅಂಶ ನಂಬರ 1ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿರುತ್ತದೆ.

20. **ಅಂಶ ನಂ.2 :-** ಅಂಶ ನಂ.1ನ್ನು ನಕರಾತ್ಮಕವಾಗಿ ಉತ್ತರಿಸಿರುವುದರಿಂದ, ಈ ಕೆಳಗಿನಂತೆ ಅಂತಿಮವಾಗಿ ಆದೇಶಿಸಿರುತ್ತೇನೆ.

**ಆ ದೇ ಶ**

ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 255(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಆರೋಪಿತನನ್ನು ಕರ್ನಾಟಕ ಪೊಲೀಸ ಕಾಯ್ದೆ ಕಲಂ.78(3) ರಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕೆ ನಿರ್ದೋಷಿಯೆಂದು ತೀರ್ಮಾನಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿತನನ್ನು ನ್ಯಾಯಾಲಯಕ್ಕೆ ಬರೆದುಕೊಟ್ಟ ವಯಕ್ತಿಕ ಮುಚ್ಚಳಿಕೆ ಹಾಗೂ ಜಾಮೀನುದಾರನು ಬರೆದುಕೊಟ್ಟ ಮುಚ್ಚಳಿಕೆಯನ್ನು ಅಪರಾಧಿಕ ಪ್ರಕ್ರಿಯಾ ಸಂಹಿತೆಯ ಕಲಂ 437(ಎ) ರನ್ವಯ ಇಂದಿನಿಂದ 6 ತಿಂಗಳವರೆಗೆ ಮುಂದುವರೆಸಲಾಗಿರುತ್ತದೆ.

ದೋಷಾರೋಪಣಾ ಪಟ್ಟಿಯಲ್ಲಿ ಕಾಣಿಸಿದ ಪಿ.ಆರ್.ನಂ.136/2020 ರಲ್ಲಿರುವ ಮುದ್ದೇಮಾಲು-1. ರೂ.1250/- ನಗದು ಹಣ ಅಪೀಲು ಅವಧಿ ಮುಗಿದ ನಂತರ ಸರ್ಕಾರಕ್ಕೆ ಜಮಾ ಮಾಡಲು ಈ ಮೂಲಕ ಆದೇಶಿಸಲಾಗಿದೆ.

ಮುದ್ದೇಮಾಲು-2 ಒಂದು ಮಟಕಾ ನಂಬರ ಬರೆದ ಚೀಟಿ ಮತ್ತು ಮುದ್ದೇಮಾಲು-3 ಒಂದು ಪೆನ್ನು ಯಾವುದೇ ಮೌಲ್ಯ ಹೊಂದಿರದ

ವಸ್ತುಗಳು ಆಗಿರುವುದರಿಂದ, ಅವುಗಳನ್ನು ಅಪೀಲು ಅವಧಿ ಮುಗಿದ ನಂತರ ನಾಶಪಡಿಸಲು ಈ ಮೂಲಕ ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನಕ್ಕೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ್ದು, ಸೂಕ್ತ ತಿದ್ದುಪಡಿಗಳನ್ನು ಮಾಡಿದ ನಂತರ ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕಃ 07 ನೇ ಮಾರ್ಚ-2026 ರಂದು ತೀರ್ಪನ್ನು ಘೋಷಿಸಲಾಯಿತು)

**(ಶ್ರೀ ಅನಿಲ ಅಮಾತೆ )**
ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು
ಅಫಜಲಪೂರ.

## ಅನುಬಂಧ

**ಅಭಿಯೋಜನೆಯ ಪರವಾಗಿ ಗುರ್ತಿಸಲ್ಪಟ್ಟಿರುವ ಸಾಕ್ಷಿದಾರರ ಪಟ್ಟಿ**

ಪಿ.ಡಬ್ಲ್ಯೂ -1 : ವಿಶ್ವನಾಥ ತಂದೆ ಮಹಾದೇವಪ್ಪ ಮುದರೆಡ್ಡಿ ಪಿ.ಎಸ್.ಐ

ಪಿ.ಡಬ್ಲ್ಯೂ -2 : ಶಿವಪ್ಪ ತಂದೆ ಗಿರಿಮಲ್ಲಪ್ಪ

ಪಿ.ಡಬ್ಲ್ಯೂ -3 : ರುದ್ರಪ್ಪ ತಂದೆ ರಾಮಪ್ಪ ನಿವೃತ್ತ ನೌಕರ

ಪಿ.ಡಬ್ಲ್ಯೂ -4 : ಚಂದಪ್ಪ ತಂದೆ ರಮೇಶ

ಪಿ.ಡಬ್ಲ್ಯೂ -5 : ರಾವುತಪ್ಪ ತಂದೆ ಬಸಪ್ಪ ಪಿ.ಸಿ.571

**ಅಭಿಯೋಜನೆಯ ಪರವಾಗಿ ಗುರ್ತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿ**

ನಿ.ಪಿ.1 : ಫಿರ್ಯಾದಿ

ನಿ.ಪಿ.1(ಎ) : ಪ್ರಾಸಾ-1 ರವರ ಸಹಿ

ನಿ.ಪಿ.1(ಬಿ) : ಪ್ರಾಸಾ-3 ರವರ ಸಹಿ

ನಿ.ಪಿ.2 : ಜಪ್ತಿ ಪಂಚನಾಮೆ

| | | |
|---|---|---|
| ನಿ.ಪಿ.2(ಎ) | : | ಪ್ರಾಸಾ-1 ರವರ ಸಹಿ |
| ನಿ.ಪಿ.2(ಬಿ) | : | ಪ್ರಾಸಾ-2 ರವರ ಸಹಿ |
| ನಿ.ಪಿ.2(ಸಿ) | : | ಪ್ರಾಸಾ-4 ರವರ ಸಹಿ |
| ನಿ.ಪಿ.3 | : | ಪ್ರ.ವ.ವರದಿ |
| ನಿ.ಪಿ.3(ಎ) | : | ಪ್ರಾಸಾ-3 ರವರ ಸಹಿ |

**ಆರೋಪಿತನ ಪರವಾಗಿ ಗುರ್ತಿಸಲ್ಪಟ್ಟಿರುವ ಸಾಕ್ಷಿ ದಾರರ ಪಟ್ಟಿ**

- ಇಲ್ಲ

**ಆರೋಪಿತನ ಪರವಾಗಿ ಗುರ್ತಿಸಲ್ಪಟ್ಟಿರುವ ದಸ್ತಾ ವೇಜುಗಳ ಪಟ್ಟಿ**

- ಇಲ್ಲ -

**ಅಭಿಯೋಜನೆ ಪರವಾಗಿ ಗುರ್ತಿಸಲಾದ ಮುದ್ದೆಮಾಲುಗಳ ವಿವರ**

| | |
|---|---|
| ಮುದ್ದೇಮಾಲು-1 | ರೂ.1250/- ನಗದು ಹಣ,<br>ಒಂದು ಮಟಕಾ ನಂಬರ ಬರೆದ ಚೀಟಿ<br>ಮತ್ತು ಒಂದು ಪೆನ್ನ. |
| ಮುದ್ದೇಮಾಲು-1(ಎ) | ಪ್ರಾಸಾ-2 ರವರ ಸಹಿ |

ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು
ಅಫಜಲಪೂರ.

Visit **ecourts.gov.in** for updates or download mobile app “**eCourts Services**” from Android or iOS